# ನವರಾತ್ರಿಯ ದುರ್ಗಾಪೂಜೆ

◆ ಕುಮಾರಿ ಪುಷ್ಪಾ. ಪಿ.

ಮಾನವನ ಜೀವನವನ್ನು ದುಃಖ, ನೋವು ಆತಂಕಗಳು ಕ್ಲಿಷ್ಟಗೊಳಿಸಿವೆ. ಈ ದುಃಖ ದುಮ್ಮಾನಗಳಿಂದ ನಿವಾರಣೆ ಹೊಂದಲು ಲೌಕಿಕ ಉಪಾಯ ಕಾಣದೆ ದೈವೀಶಕ್ತಿಯ ಸಹಾಯಕ್ಕಾಗಿ ಅಸಹಾಯಕತೆಯ ಕೂಗು ಹೃದಯದಿಂದ ಹೊಮ್ಮುತ್ತದೆ. ದುರ್ಗಾದೇವಿಯು ಆ ದೈವೀಶಕ್ತಿಯ ಪ್ರತೀಕ, ದುಃಖವನ್ನು ನಿವಾರಿಸಬಲ್ಲವಳು. ಮಹಾಭಾರತದಲ್ಲಿ **ದುರ್ಗಾ ತಾರಯಸೀ ದುರ್ಗಾತ್ ತಸ್ಮಾತ್ ತ್ವಂ ದುರ್ಗಾ ಸ್ಮೃತಾ ಜನೈಃ॥** (ಆಪತ್ತುಗಳಿಂದ ರಕ್ಷಿಸುವವಳಾದ್ದರಿಂದ ನೀನು ದುರ್ಗೆ ಎಂದು ಪ್ರಸಿದ್ಧಳಾಗಿರುವೆ) ಎಂದು ಹೇಳಿದೆ. ಶ್ರೀರಾಮಕೃಷ್ಣರು ಅದೇ ಅರ್ಥವನ್ನು ಕೊಡುವ **ಶ್ರೀದುರ್ಗಾ ನಾಮ ಜಪ, ಸದಾ ರಸನಾ, ಅಮಾರ್ ದುರ್ಗಮೆ ಶ್ರೀದುರ್ಗಾ ಬಿನೆ ಕೇ ಕರೇ ನಿಸ್ತಾರ್** ಎಂಬ ಬಂಗಾಳಿ ಹಾಡನ್ನು ಇಷ್ಟಪಡುತ್ತಿದ್ದರು. "ಶ್ರೀದುರ್ಗೆಯ ನಾಮವನ್ನು ಸದಾ ಸ್ಮರಿಸು ನಾಲಿಗೆಯೇ, ದುರ್ಗಮ ಪಥದಲ್ಲಿ ಅವಳನ್ನು ಬಿಟ್ಟು ಕಾಪಾಡುವವರು ಯಾರಿದ್ದಾರೆ" ಎಂಬುದು ಇದರ ಅರ್ಥ.




೫-೬ನೆಯ ಶತಮಾನದಲ್ಲಿ ಮಾರ್ಕಂಡೇಯ ಪುರಾಣದ ರಚನೆಯಾಯಿತು ಎಂದು ಹೇಳಲಾಗಿದೆ. ಪ್ರಸಿದ್ಧವಾಗಿರುವ 'ಚಂಡಿ' ಇದರ ಒಂದು ಭಾಗವಾಗಿದೆ. ಅದರಲ್ಲಿ ದೇವಿಯ ಶೌರ್ಯದ ಮಹಿಮೆಯನ್ನು ವರ್ಣಿಸಲಾಗಿದೆ. ಎಲ್ಲಾ ಋಷಿಗಳಿಂದಲೂ, ದೇವತೆಗಳಿಂದಲೂ ಪಡೆದುಕೊಂಡ ಉತ್ತಮ ಗುಣಗಳಾದಂತಹ ಸೌಂದರ್ಯ, ಶೌರ್ಯ, ಶಸ್ತ್ರಾದಿಗಳು ಅವಳಿಗೆ ಹಿರಿಮೆಯನ್ನು ತಂದಿವೆ. ಡಾ.ಸುಕುಮಾರ್ ಸೇನ್ ಅವರ ವಿವರಣೆಯ ಪ್ರಕಾರ, ಕೆಲವು ಕಾಡು ಜನಾಂಗದವರು ೪,೨೦೦ ವರ್ಷಗಳ ಹಿಂದೆ ಏಷ್ಯಾ ಮೈನರ್‌ನಲ್ಲಿ ವಾಸಿಸುತ್ತಿದ್ದರು. ತ್ರಿಶೂಲವನ್ನು ಕೈಯಲ್ಲಿ ಒಡಿದಿರುವ ಸಿಂಹವಾಹಿನಿ ದೇವಿಯ ಕಲ್ಲಿನ ವಿಗ್ರಹ ಅಲ್ಲಿ ದೊರೆತದ್ದೇ ಇದಕ್ಕೆ ಆಧಾರ. ಇಂಡೋ-ಗ್ರೀಕ್ ಭಾಷೆಯಲ್ಲಿ ಆ ವಿಗ್ರಹವನ್ನು 'ಗದನ್ ಮಾ' ಎಂದು ಕರೆಯುತ್ತಿದ್ದರು. ಅದಕ್ಕೆ ಹತ್ತಿರದ ಸಂಸ್ಕೃತ ಭಾಷೆಯ ಪದವೆಂದರೆ 'ಕ್ಷಮಾ-ಮಾ'. ದೇವೀ ಮಾಹಾತ್ಮ್ಯದಲ್ಲಿ 'ಕರುಣಾಮಯಿ' ಎಂದು ಆ ದಿವ್ಯಮಾತೆಯನ್ನು ವಿವರಿಸಲಾಗಿದೆ.

## ದುರ್ಗಾಪೂಜೆಯ ಬೆಳವಣಿಗೆ

**ಪೌರಾಣಿಕ** : ಧಾರ್ಮಿಕ ಹಬ್ಬಗಳು ಮತ್ತು ಆಚರಣೆಗಳಿಗೆ ಪೌರಾಣಿಕ ತಳಹದಿ ಇರುತ್ತದೆ. ದೇವಿಯನ್ನು ಶಿವನ ಅರ್ಧಾಂಗಿ, ಹಿಮವಂತನ ಮಗಳು, ಹೀಗೆ ಅನೇಕ ಹೆಸರುಗಳಿಂದ ಕರೆಯುತ್ತಾರೆ. 'ಕರುಣೆ' ಮತ್ತು 'ಉಗ್ರತೆ' ಈ ಎರಡೂ ಗುಣಗಳನ್ನು ಶಿವನ ಶಕ್ತಿಯಾದ ಅವಳಲ್ಲಿ ಕಾಣಬಹುದು. ಕರುಣಾಮಯಿಯಾಗಿ ಉಮಾ, ಗೌರೀ, ಪಾರ್ವತೀ ಎಂದೂ, ಉಗ್ರಳಾದಾಗ ದುರ್ಗಾ, ಕಾಳೀ, ಚಂಡೀ ಎಂದು ಅವಳನ್ನು ಕರೆಯಲಾಗುತ್ತದೆ.

ನವರಾತ್ರಿಯ ದಿನಗಳಲ್ಲಿ ಉತ್ತರ ಭಾರತದಲ್ಲಿ ಹಾಗೂ ಪಶ್ಚಿಮ ಬಂಗಾಳದಲ್ಲಿ ಆಚರಿಸಲ್ಪಡುವ ದುರ್ಗಾಪೂಜೆಯ ವಿವರಗಳನ್ನು ಸಂಕ್ಷೇಪವಾಗಿ ತಿಳಿಸುವ ಪ್ರಯತ್ನವನ್ನು ಮಾಡಿರುವ ಲೇಖಕಿ ಮೈಸೂರಿನ ನಿವಾಸಿ.

ಅನೇಕ ವರ್ಷಗಳ ದೀರ್ಘ ತಪಸ್ಸಿನಿಂದ ಮಹಿಷಾಸುರನಿಗೆ ಬ್ರಹ್ಮನಿಂದ ಒಂದು ವರ ದೊರಕಿತು. ಯಾವ ಪುರುಷನಿಂದಲೂ ಅವನಿಗೆ ಸಾವು ಬರುವುದಿಲ್ಲ ಎಂಬುದೇ ಆ ವರ. ಆ ವರದ ಬಲದಿಂದ ಹೆಚ್ಚಿದ ಮಹಿಷಾಸುರನ ದುಷ್ಟತನವನ್ನು ತಡೆಯುವುದು ದೇವತೆಗಳಿಗೆ ಅಸಾಧ್ಯವಾಯಿತು. ಅಧರ್ಮ, ಹಿಂಸಾತ್ಮಕ ಪ್ರವೃತ್ತಿಗಳನ್ನು ಕಂಡು ತ್ರಿಮೂರ್ತಿಗಳಲ್ಲಿ ಶಿವ, ವಿಷ್ಣು ಇಬ್ಬರಿಗೂ ವಿಪರೀತ ಕೋಪ ಬಂತು. ಅವರ ಮುಖಗಳಿಂದಲೂ, ಇತರ ದೇವತೆಗಳಿಂದಲೂ ಮಹತ್ತಾದ ಒಂದು ತೇಜಃಪುಂಜವು ಹೊರಗೆ ಬಂದಿತು. ಕ್ರಮೇಣ ಆ ತೇಜಃಪುಂಜವು ಸುರಸುಂದರಿಯಾದ ಒಂದು ನಾರೀರೂಪವನ್ನು ತಾಳಿತು. ಆಗ ಅವಳನ್ನು ಕುರಿತು ಇತರ ದೇವತೆಗಳೆಲ್ಲ ಸ್ತುತಿಸಿ, ಪ್ರಾರ್ಥಿಸಿದರು. ಆಯುಧ, ಭೂಷಣಗಳನ್ನು ಪಡೆಯುವುದರ ಮೂಲಕ ಆಕೆ ಎಲ್ಲಾ ದೇವತೆಗಳಿಂದ ಗೌರವಿಸಲ್ಪಟ್ಟಳು. ದೇವಿಯ ಮತ್ತು ರಾಕ್ಷಸರ ಮಧ್ಯೆ ಭಯಂಕರವಾದ ಯುದ್ಧ ನಡೆಯಿತು. ದೇವಿಯು ರಾಕ್ಷಸರನ್ನು ಸಂಹಾರ ಮಾಡಿದಳು.

ರಾಕ್ಷಸರು ಕೊಡುತ್ತಿದ್ದ ಹಿಂಸೆ, ಸಾವುಗಳಿಗೆ ಜನರು ಹೆದರುತ್ತಿದ್ದರು ಮತ್ತು ಮೂಢನಂಬಿಕೆಗಳಿಗೆ, ಕ್ಷುದ್ರ ಶಕ್ತಿಗಳಿಗೆ ಪ್ರಾಧಾನ್ಯತೆ ನೀಡುತ್ತಿದ್ದರು. ರಾಕ್ಷಸರ ಭಯಂಕರ ಕೃತ್ಯಗಳಿಂದ ತಮ್ಮನ್ನು ರಕ್ಷಿಸಿಕೊಳ್ಳಲು ಅವರಿಗೆ ಒಂದು ದೈವೀಶಕ್ತಿಯ ಆಧಾರ ಬೇಕಿತ್ತು. ಆದ್ದರಿಂದ ಅವರು 'ಮಾತೃಪೂಜಾ' ವಿಧಾನವನ್ನು ಬಯಸಿದರು. ದೇವಿಯಲ್ಲಿ ಅಡಕವಾಗಿದ್ದ ಅಸಾಧಾರಣ ಶಕ್ತಿಗೆ ಮತ್ತು ಶೌರ್ಯಕ್ಕೆ ಶರಣಾದರು. ಪ್ರತಿ ಮಾನವನ ಅಂತರಂಗದಲ್ಲಿ ಮಿಡಿಯುವ ಮಾತೃಹೃದಯ ಹಾಗೂ ಇಂದ್ರಿಯ ಚಾಂಚಲ್ಯದ ವಿರುದ್ಧ ನಡೆಯುವ ಹೋರಾಟದ ಪ್ರತೀಕವಾಗಿ ಮಾತೃಪೂಜೆಯು ಪ್ರಾರಂಭಗೊಂಡಿತು ಎಂದು ತಿಳಿಯಬಹುದು.

### ಶಾರದೀಯ ಪೂಜೆ ಅಥವಾ ಶರದೃತುವಿನ ಪೂಜೆಯ ಮೂಲ

ದುರ್ಗಾಪೂಜೆಯನ್ನು ಸಾಮಾನ್ಯವಾಗಿ ಶರತ್ಕಾಲದಲ್ಲಿ ಆಚರಿಸುವುದರಿಂದ ಇದನ್ನು 'ಶಾರದೀಯ ಪೂಜೆ' ಎನ್ನುವರು. ವೇದಗಳ ಕಾಲದಲ್ಲಿ ಶರದೃತುವು ಋತುಗಳಲ್ಲಿ ಮೊದಲನೆಯದಾಗಿತ್ತು. 'ಇಷ್' ಮತ್ತು 'ಊರ್ಜ್' – ಅಶ್ವಿನಿ ಮತ್ತು ಕಾರ್ತಿಕ ಎಂಬ ಎರಡು ತಿಂಗಳು ಶರದೃತುವನ್ನು ಸೂಚಿಸುತ್ತವೆ. 'ರುದ್ರಯಾಗ' ಎಂಬ ಒಂದು ಮುಖ್ಯವಾದ ಯಾಗವನ್ನು ಈ ಸಮಯದಲ್ಲಿ ಮಾಡುತ್ತಿದ್ದರು. ಈ 'ರುದ್ರಯಾಗ' ವೇ ದುರ್ಗಾಪೂಜೆಯಾಗಿ ಪರಿವರ್ತಿತವಾಯಿತು ಎಂಬ ಒಂದು ಅಭಿಪ್ರಾಯವಿದೆ. ವೇದಗಳ ಕಾಲದಲ್ಲಿ ಶರದೃತುವು ಎಲ್ಲಾ ದೇವತೆಗಳ ಆರಾಧನೆಗೆ ಮಂಗಳಕರ ಸಮಯವಾಗಿತ್ತು. ದುರ್ಗಾಪೂಜೆಯು ಶರದೃತುವಿನ ಮೊದಲ ಪೂಜೆಯಾದ್ದರಿಂದ ಪ್ರಕೃತಿ ಸೇರಿದಂತೆ ಎಲ್ಲದರಲ್ಲೂ ಎಲ್ಲರಲ್ಲೂ ಸುಪ್ತವಾಗಿರುವ ಶಕ್ತಿಯನ್ನು ಎಚ್ಚರಗೊಳಿಸುವ ಕ್ರಿಯೆ ಇದು. ಶ್ರೀರಾಮನು ರಾವಣನನ್ನು ಸಂಹರಿಸುವುದಕ್ಕೆ ಮುಂಚೆ ದೇವಿಯನ್ನು ಶರದೃತುವಿನಲ್ಲಿ ಪೂಜಿಸಿದನಂತೆ. ಅವನ ಪೂಜೆಯಿಂದ ಪ್ರಸನ್ನಳಾಗಿ ಸಪ್ತಮಿಯಂದು ದೇವಿಯು ಶ್ರೀರಾಮನ ಆಯುಧಗಳಲ್ಲಿ ಪ್ರವೇಶ ಮಾಡಿದಳು. ಅಷ್ಟಮಿಯಂದು ರಾಮ-ರಾವಣರ ನಡುವೆ ಭಯಂಕರ ಯುದ್ಧವಾಯಿತು. ಅಷ್ಟಮಿ ಮತ್ತು ನವಮಿಯ ಸಂಧಿ ಕಾಲದಲ್ಲಿ ಶ್ರೀರಾಮನು ರಾವಣನ ಶಿರಚ್ಛೇದನವನ್ನು ಮಾಡಿದ, ನವಮಿಯು ಪ್ರಾರಂಭವಾದ ನಂತರ ರಾವಣನು ಮರಣ ಹೊಂದಿದ. ದಸರೆಗೆ ಇರುವ ಮತ್ತೊಂದು ವ್ಯಾಖ್ಯಾನ ಇದು.

ಮಾರ್ಕಂಡೇಯ ಪುರಾಣದ ಪ್ರಕಾರ, ರಾಜ ಸುರಥ ಮತ್ತು ವ್ಯಾಪಾರಿಯಾದ ಸಮಾಧಿಯರು ಸಂಸಾರದಲ್ಲಿ ನೊಂದು ಸುಮೇಧ ಮುನಿಯ ಉಪದೇಶದಂತೆ ನದೀತೀರದಲ್ಲಿ ಮಣ್ಣಿನಿಂದ ದೇವಿಯ ಮೂರ್ತಿಯನ್ನು ಮಾಡಿ, ಪೂಜಿಸಿದರು. ತಪಸ್ಸನ್ನು ಮಾಡಿದ ನಂತರ ಆ ವಿಗ್ರಹವನ್ನು ನೀರಿನಲ್ಲಿ ಮುಳುಗಿಸಿದರು. ಅಂದಿನಿಂದ ಮಣ್ಣಿನಿಂದ ಮಾಡಿದ ವಿಗ್ರಹವನ್ನು ಪೂಜೆಯ ಬಳಿಕ ನೀರಿನಲ್ಲಿ ಮುಳುಗಿಸುವ ಆಚರಣೆ ಬೆಳೆದುಬಂದಿದೆ. 'ಹರಿವಂಶ' ಪುರಾಣದ ಪ್ರಕಾರ ಶಬರರು, ವನಚರರು, ಪುಲಿಂದ ಮೊದಲಾದ ಜನಾಂಗದವರು ಶರದೃತುವಿನಲ್ಲಿ ದೇವಿಯ ರಥೋತ್ಸವವನ್ನು ಆಚರಿಸುತ್ತಿದ್ದರು. ೧೯ನೆಯ ಶತಮಾನದಲ್ಲಿ ರಥೋತ್ಸವವನ್ನು ಆಶ್ವಯುಜ ಮಾಸದ ಹತ್ತನೆಯ ಚಾಂದ್ರದಿನದಂದು ಆಚರಿಸುತ್ತಿದ್ದರು. ಈಗ ಅದು ಸಂಪೂರ್ಣ ಹೇಳಹೆಸರಿಲ್ಲವಾಗಿದೆ. ಹಿಂದಿನ ದಿನಗಳಲ್ಲಿ ವರ್ಷದಲ್ಲಿ ಎರಡು ಬಾರಿ ದೇವಿಯ ಪೂಜೆಯನ್ನು ಮಾಡುತ್ತಿದ್ದರು. ಈಗ ವಸಂತ ಮಾಸದಲ್ಲಿ ಮಾಡುವ 'ವಾಸಂತಿ ದುರ್ಗಾಪೂಜೆ' ಅಪರೂಪವಾಗಿದೆ.

ದೇವಿ ದುರ್ಗೆಯನ್ನು ವಿಗ್ರಹರೂಪದಲ್ಲಿ ಪೂಜಿಸುತ್ತಾರೆ. ದೇವಿಯ ವಿಗ್ರಹವನ್ನು ಶಾಸ್ತ್ರಗಳಲ್ಲಿ ಹೇಳಿರುವಂತೆ ರಚಿಸಿ ಧ್ಯಾನದ ಮಂತ್ರದಲ್ಲಿರುವಂತೆ ವಿಗ್ರಹವನ್ನು ಅಲಂಕರಿಸುತ್ತಾರೆ. ದೇವಿಯ ಮುಖವು ಪೂರ್ಣಚಂದ್ರನಂತೆ ಕಂಗೊಳಿಸುತ್ತಿದ್ದು, ತಲೆಯ ಮೇಲೆ ಅರ್ಧಚಂದ್ರಾಕೃತಿಯ ಅಲಂಕಾರ, ಮೂರು ಕಣ್ಣುಗಳು, ಕಾಂಚನ ವರ್ಣ, ಯೌವನದಿಂದ ಪ್ರಕಾಶಿಸುತ್ತಿರುತ್ತದೆ. ಒಡವೆ ವಸ್ತ್ರಗಳಿಂದ ಅಲಂಕರಿಸಲ್ಪಟ್ಟು ಹತ್ತು ಕೈಗಳಲ್ಲಿ ಹತ್ತು ಆಯುಧಗಳನ್ನು ಹಿಡಿದಿರುತ್ತಾಳೆ. ಬಲಗಾಲನ್ನು ಸಿಂಹದ ಮೇಲೂ, ಎಡಗಾಲನ್ನು ಕೆಳಗೆ ಬಿದ್ದಿರುವ ಮಹಿಷಾಸುರನ ಭುಜದ ಮೇಲೂ ಇಟ್ಟಿರುತ್ತಾಳೆ.

ತನ್ನ ತ್ರಿಶೂಲದಿಂದ ಮಹಿಷಾಸುರನನ್ನು ಇರಿದು ಕೊಂದಿರುತ್ತಾಳೆ. ಅವಳ ಮುಖಕಮಲದಲ್ಲಿ ಮುಗುಳ್ನಗೆ ಮಿಂಚುತ್ತಿರುತ್ತದೆ. ತನ್ನ ಸಂಹಾರಕೃತ್ಯದ ಹಿಂದೆ ಜಗತ್ತಿನ ಎಲ್ಲ ಜೀವಿಗಳ ಬಗ್ಗೆ ಅಪಾರವಾದ ಕರುಣೆ ತುಂಬಿದ ಹೃದಯವಿದೆ ಎಂಬುದನ್ನು ಅವಳ ಹೊಳೆಯುತ್ತಿರುವ ಕಣ್ಣುಗಳು ಸೂಚಿಸುತ್ತವೆ.

ಪುರಾತತ್ವ ಶೋಧನೆಯಿಂದ ಮಹಿಷಾಸುರ ಮರ್ದನದ ಅನೇಕ ರೀತಿಯ ವಿಗ್ರಹಗಳು ಭಾರತದಲ್ಲಿ ದೊರಕಿವೆ. ಸಿಂಹವಾಹಿನಿ ದುರ್ಗೆಯ ವಿಗ್ರಹಗಳು ಕಡಿಮೆ. ಅಲ್ಲದೆ ದೇವಿಗೆ ಎರಡು ಕೈಗಳಿಂದ ಮೂವತ್ತೆರಡು ಕೈಗಳವರೆಗೆ ಇರಬಹುದು. ಪುರಾಣಗಳಲ್ಲೂ, ತಂತ್ರಶಾಸ್ತ್ರಗಳಲ್ಲಿಯೂ ಕೂಡ ಈ ವಿಷಯದಲ್ಲಿ ವ್ಯತ್ಯಾಸಗಳಿವೆ. ಯಾವಾಗ ಇಂತಹ ವಿಗ್ರಹಗಳ ರಚನೆಯಾಯಿತು, ಈ ರೀತಿಯ ಪೂಜಾಕಾರ್ಯ ಎಂದು ಶುರುವಾಯಿತು ಎಂಬುದು ಸರಿಯಾಗಿ ತಿಳಿದುಬಂದಿಲ್ಲ.

೭ನೆಯ ಶತಮಾನದಲ್ಲಿ ಶಶಾಂಕನೆಂಬ ರಾಜನು ದಶಭುಜಧಾರಿಣಿಯಾದ ಮಹಿಷಾಸುರಮರ್ದಿನಿಯನ್ನು ಪೂಜಿಸುತ್ತಿದ್ದನೆಂದು ಕೆಲವು ವಿದ್ವಾಂಸರು ಹೇಳುತ್ತಾರೆ. ೧೪೪೦-೭೦ರ ಅವಧಿಯಲ್ಲಿ ರಚಿತವಾದ 'ದುರ್ಗಾಭಕ್ತಿತರಂಗಿಣಿ' ಎಂಬ ಶಕ್ತಿಪೂಜೆಯ ಕಾವ್ಯದಲ್ಲಿ ಹತ್ತು, ಹದಿನಾರು, ಹದಿನೆಂಟು ಕೈಗಳಿರುವ ದೇವತೆ ಎಂಬ ಪ್ರಸ್ತಾಪವಿದೆ. ದೇವಿಯು ಗಣೇಶ, ಕಾರ್ತಿಕೇಯರೊಂದಿಗೂ, ಜಯವಿಜಯರೊಂದಿಗೂ ಇರುವುದನ್ನು ತಿಳಿಸಿದೆ. ಜಯವಿಜಯರ ಜಾಗದಲ್ಲಿ ಅನಂತರದ ಕಾಲದಲ್ಲಿ ಲಕ್ಷ್ಮೀ-ಸರಸ್ವತಿಯರನ್ನು ಸೇರಿಸಲಾಯಿತು. ಬಂಗಾಳದಲ್ಲಿರುವ ವಾಡಿಕೆಯಂತೆ ಗಣೇಶ ಕಾರ್ತಿಕೇಯರ ಜಾಗ ಬದಲಾವಣೆಯಾಗುತ್ತಿರುತ್ತದೆ. ಕೆಲವು ಸಮಯ ಜಯ-ವಿಜಯ, ರಾಧಾ-ಕೃಷ್ಣರನ್ನೂ ರಚಿಸುತ್ತಾರೆ. ಲಕ್ಷ್ಮೀ-ಸರಸ್ವತಿಯರ ಜಾಗದಲ್ಲೂ ಬದಲಾವಣೆ ಮಾಡುತ್ತಿರುತ್ತಾರೆ.

ಗೋರಕ್ಷನಾಥ ಎಂಬ ಸಂತ ದುರ್ಗೆಯನ್ನು ದಿವ್ಯ ದರ್ಶನದಲ್ಲಿ ಕಂಡದ್ದಲ್ಲದೆ ಬೇರೆ ಬೇರೆ ದೇವತೆಗಳನ್ನೂ ಜೊತೆಯಲ್ಲಿಯೂ ಕಂಡಿದ್ದರು. ಅವರ ಶಿಷ್ಯನಾದ ಸದಾನಂದ, ದೇವಿಯನ್ನು ಇಂದು ಪ್ರಚಲಿತವಿರುವ ರೂಪದಲ್ಲಿ ಪೂಜಿಸಿದನು. ಕೃಷ್ಣಾನಂದ, ಆಗಮವಾಗೀಶ ಎಂಬ ಪ್ರಖ್ಯಾತ ತಾಂತ್ರಿಕರು ಅನುಸರಿಸಿದ ಪೂಜಾಕ್ರಮ ಬಂಗಾಳದ ಎಲ್ಲಾ ಕಡೆಯೂ ಆಚರಣೆಯಲ್ಲಿದೆ. ಬಂಗಾಳದ ವಿಗ್ರಹಗಳ ಮೇಲೆ ಕಂಡುಬರುವ ಬೌದ್ಧಮತದ ಅರ್ಧಚಂದ್ರಾಕೃತಿಯ ಚಾಲಚಿತ್ರದಲ್ಲಿ (ನೈಸರ್ಗಿಕವಾದ ಬಣ್ಣಗಳಿಂದ ತಯಾರಿಸುವ ಕಮಾನು) ಹಿಂದೂ ಪುರಾಣಗಳಲ್ಲಿ ಬರುವ ಅನೇಕ ದೇವತೆಗಳನ್ನು ಕಲಾರೂಪದಲ್ಲಿ ತೋರಿಸುತ್ತಾರೆ. ಬೌದ್ಧಮತದ ಮಹಾಯಾನದಲ್ಲಿ ಕಾಣಬರುವ ಅನೇಕ ವಿಗ್ರಹಗಳ ಮೂಲದಿಂದ ಇಂದಿನ ದುರ್ಗಾಮೂರ್ತಿಯ ಸ್ವರೂಪ ಬಂದಿರಬಹುದು ಎಂದೂ ಸಂಶೋಧಕರು ಅಭಿಪ್ರಾಯಪಟ್ಟಿರುತ್ತಾರೆ.

ದುರ್ಗಾಪೂಜೆಯ ಹಿನ್ನೆಲೆಯನ್ನು ಮೂರು ದೃಷ್ಟಿಗಳಿಂದ ನೋಡಬಹುದು. ೧.ಪೂಜಾತತ್ತ್ವ ೨.ಲೋಕಾಚಾರ ೩. ದಂತಕಥೆಗಳು ಅಥವಾ ಆಖ್ಯಾಯಿಕೆಗಳು. ಸಾಂಪ್ರದಾಯಿಕ ಪೂಜೆಯಲ್ಲಿ ಇವು ಒಂದಕ್ಕೊಂದು ಹೊಂದಿಕೊಂಡು ಇರುವಂತಹುಗಳು. ಬೇರೆ ಬೇರೆ ರೀತಿಯ ಆಚರಣೆಗಳನ್ನು ಯಾಂತ್ರಿಕವಾಗಿ ಆಚರಿಸದೆ ಅದರಲ್ಲಿರುವ ತತ್ತ್ವದ ಉನ್ನತ ಆದರ್ಶಗಳನ್ನು ಅರಿಯುವುದು ಅತ್ಯಂತ ಅಗತ್ಯ. ಪೂಜೆಯನ್ನು ಮಾಡುವಾಗ ಅಥವಾ ನೋಡುವಾಗ, ಕ್ರಿಯೆಗಳನ್ನು ಸರಿಯಾಗಿ ಗಮನಿಸಿ ಅದರ ಭಾವವನ್ನು ಗ್ರಹಿಸಿದಾಗ, ನಮ್ಮ ಮನಸ್ಸನ್ನು ಎಲ್ಲ ವಸ್ತು, ವ್ಯಕ್ತಿಗಳಲ್ಲೂ ಇರುವ ದೈವತ್ವದ ಕಡೆಗೆ ಸಹಜವಾಗಿ ಕೊಂಡೊಯ್ಯಲು ಸಾಧ್ಯವಾಗುತ್ತದೆ.

ದುರ್ಗಾಪೂಜೆಯ ಕೆಲವು ಆಚರಣೆಗಳ ಬಗ್ಗೆ ಸ್ವಲ್ಪ ವಿವರಣೆ ಆವಶ್ಯಕ. ಶ್ರೀರಾಮಕೃಷ್ಣ ವಚನವೇದದಲ್ಲಿಯೂ ಕೂಡ ಈ ಪೂಜೆಯ ಅನೇಕ ವಿಧಿಗಳ ಬಗ್ಗೆ ಉಲ್ಲೇಖವಿದೆ.

**ಕಲ್ಪಾರಂಭ:** ಈ ಪೂಜೆಯು ಕೆಲವು ದಿನಗಳ ಕಾಲ ನಡೆಯುವುದರಿಂದ ಮಂಗಳಕರವಾದ ದಿನಗಳಲ್ಲಿ ಇದನ್ನು ಪ್ರಾರಂಭಿಸಬೇಕು. ಅವರವರ ಶಕ್ತಿಗೆ ಅನುಕೂಲವಾಗುವಷ್ಟು ದಿನಗಳನ್ನು ನಿಶ್ಚಯಿಸಬಹುದು. ಕೃಷ್ಣನವಮ್ಯಾದಿ ಶುಕ್ಲ ಪ್ರತಿಪದದ, ಷಷ್ಟ್ಯಾದಿ, ಸಪ್ತಮ್ಯಾದಿ ಅಷ್ಟಮ್ಯಾದಿ, ನವಮ್ಯಾದಿ ದಿನಗಳಲ್ಲಿ ಕಲ್ಪಾರಂಭವು ವಾಡಿಕೆಯಲ್ಲಿದೆ. ದೇವಿಯನ್ನು ಪ್ರತಿಷ್ಠಾಪಿಸುವ ಮಣೆಯನ್ನು ಜನ್ಮಾಷ್ಟಮಿ ಅಥವಾ ರಥಯಾತ್ರೆಯಂದು ಪವಿತ್ರಗೊಳಿಸುತ್ತಾರೆ. ಕನ್ಯಾರಾಶಿಯ ಚಾಂದ್ರಮಾನದಲ್ಲಿ ಪಾಡ್ಯದ ದಿನ ಕಲ್ಪಾರಂಭ ಪೂಜೆಯನ್ನು ಪ್ರಾರಂಭಿಸುತ್ತಾರೆ. ಬಳಿಕ ಹತ್ತು ದಿನಗಳವರೆಗೂ ಅಂದರೆ ದಶಮಿಯವರೆಗೂ ಪೂಜೆ ನಡೆಯಬೇಕು. ಆರನೆಯ ದಿನ ದೇವಿ ದುರ್ಗೆಯನ್ನು ಮಂಗಳಕರವಾಗಿ ಎಚ್ಚರಿಸಬೇಕು. ದೇವಿಯನ್ನು ಪೂಜಿಸುವ ಆವರಣದಲ್ಲಿ ಬಿಲ್ವ ವೃಕ್ಷವಿರಬೇಕು. ವಿಧಿವತ್ತಾಗಿ ದೇವಿಯನ್ನು ಆವಾಹನೆ, ಪ್ರತಿಷ್ಠಾಪನೆಗಳಿಂದ ಪೂಜಿಸಬೇಕು. ಪೂಜೆಯ ನಂತರ ಮಾತೃದೇವಿಯನ್ನು ಹೃದಯಾಂತರಾಳದಿಂದ ಪ್ರಾರ್ಥಿಸಬೇಕು.

**ಆಮಂತ್ರಣ ಮತ್ತು ಅಧಿವಾಸ:** ದೇವಿಯನ್ನು ಮಂತ್ರಗಳಿಂದ ಆಹ್ವಾನಿಸುವುದು ಮತ್ತು ದೇವಿಯ ವಿಗ್ರಹವನ್ನು ಶುದ್ಧತೆಯ ಪ್ರತೀಕವಾದ ಅನೇಕ ವಸ್ತುಗಳಿಂದ ಶಾಸ್ತ್ರೋಕ್ತವಾಗಿ ಶುದ್ಧಗೊಳಿಸುವುದು- ಇದನ್ನು ಸಪ್ತಮಿಯ ದಿನ ಆಚರಿಸುತ್ತಾರೆ. ಅಧಿವಾಸದ ವೇಳೆಯಲ್ಲಿ ಭಕ್ತರು ಹೂವು, ಮೊಸರು ಮುಂತಾದ ಪರಿಕರಗಳನ್ನು ಉಪಯೋಗಿಸುತ್ತಾರೆ. ಆರನೆಯ ದಿನ ಸಂಧ್ಯಾ ಸಮಯದಲ್ಲಿ ದೇವಿ ಬಂದು ಬಿಲ್ವಗಿಡದಲ್ಲಿ ನೆಲೆಸುತ್ತಾಳೆ. ಅದರ ಮಾರನೆಯ ದಿನ ಬೆಳಗ್ಗೆ ಅವಳನ್ನು

ವಿಗ್ರಹದಲ್ಲಿ ಆವಾಹನೆ ಮಾಡುತ್ತಾರೆ.


**ನವಪತ್ರಿಕಾ:** ದುರ್ಗಾಪೂಜೆಯ ಸಮಯದಲ್ಲಿ ಅರಿಶಿನ ಮುಂತಾದ ಒಂಬತ್ತು ಔಷಧ ಮೌಲ್ಯವಿರುವ ಗಿಡಗಳು ಮತ್ತು ಎರಡು ಬಿಲ್ವ ಹಣ್ಣುಗಳನ್ನು ಹೊಂದಿರುವ ಒಂದು ಕೊಂಬೆ, ಒಂದು ಬಳ್ಳಿಯನ್ನು ಪೂಜಿಸುವ ಆಚರಣೆ ಇದೆ. ಎಲ್ಲ ಸಸಿಗಳನ್ನು ಒಂದು ಬಾಳೆಯ ಗಿಡಕ್ಕೆ ಕಟ್ಟಿ ಪವಿತ್ರ ಸ್ನಾನವಾದ ಮೇಲೆ ಇವನ್ನು ಗಣೇಶನ ಬಲಭಾಗದಲ್ಲಿ ಪ್ರತಿಷ್ಠಾಪನೆ ಮಾಡುತ್ತಾರೆ. ಅದನ್ನು ಸ್ತ್ರೀಯಂತೆ ವೇಷಭೂಷಣಗಳಿಂದ ಅಲಂಕರಿಸುತ್ತಾರೆ. ಈ ಒಂಬತ್ತು ಸಸಿಗಳು ಒಂಬತ್ತು ದೇವತೆಗಳನ್ನು ಪ್ರತಿನಿಧಿಸುತ್ತವೆ. ಆ ದೇವತೆಗಳೂ ರಾಕ್ಷಸರ ನಾಶದಲ್ಲಿ ದೇವಿಗೆ ಸಹಾಯ ಮಾಡಿದವರಾಗಿರುತ್ತಾರೆ.

**ಮಹಾಸ್ನಾನ:** ದುರ್ಗಾಪೂಜೆಯನ್ನು ಮಹಾಪೂಜೆಯೆಂದು ಕರೆಯುತ್ತಾರೆ. ಇದರಲ್ಲಿ ನಾಲ್ಕು ಮುಖ್ಯವಾದ ಪೂಜಾಕ್ರಮಗಳಿವೆ. ಅಭಿಷೇಕ ಅಥವಾ ಮಹಾಸ್ನಾನ, ಪೂಜೆ, ಬಲಿ ಮತ್ತು ಹೋಮ. ದುರ್ಗಾಪೂಜೆಯ ಸಮಯದಲ್ಲಿ ಮೂರು ಮುಖ್ಯ ದಿನಗಳಾದ ಸಪ್ತಮಿ, ಅಷ್ಟಮಿ, ನವಮಿಗಳಂದು ಅಭಿಷೇಕ ಮಾಡುತ್ತಾರೆ. ಮಹಾಸ್ನಾನದಲ್ಲಿ ಬೇರೆ ಬೇರೆ ನದಿಗಳಿಂದ ತಂದ ನೀರಿನಿಂದಲೂ ಬೇರೆ ಬೇರೆ ಜಾಗಗಳಿಂದ ತಂದ ಮಣ್ಣಿನಿಂದಲೂ, ಬೇರೆ ಬೇರೆ ಹಣ್ಣುಗಳ ರಸಗಳಿಂದಲೂ ಮತ್ತು ಇತರ ವಿಶೇಷ ವಸ್ತುಗಳಿಂದಲೂ ಅಭಿಷೇಕ ಮಾಡುತ್ತಾರೆ. ವರಾಹದಂತ, ವೇಶ್ಯೆಯ ಮನೆಬಾಗಿಲಿನ ಮಣ್ಣು ಅಥವಾ ಧೂಳು—ಇಂತಹ ವಸ್ತುಗಳಿಂದ ದೇವಿಗೆ ಸ್ನಾನ ಮಾಡಿಸಲಾಗುತ್ತದೆ. ಅವಳೇ ಇಡೀ ಜಗತ್ತನ್ನು ವ್ಯಾಪಿಸಿರುವುದರಿಂದ ಒಳಿತು, ಕೆಡಕುಗಳನ್ನು ಮೀರಿ ನಿಂತಿರುವವಳು, ಅದೇ ನಮ್ಮ ಮನೋಭಾವ ಆಗಬೇಕು ಎಂಬುದು ಇದರ ಹಿನ್ನೆಲೆಯ ತತ್ತ್ವ. ಕೆಲವು ಕಡೆಯ ಮಣ್ಣುಗಳಲ್ಲಿ ಹೆಚ್ಚು ಕ್ಷಾರವಿರುವುದರಿಂದ ಅದು ಪರಿಶುದ್ಧ ಮಾಡುವ ಶಕ್ತಿಯನ್ನು ಪಡೆದಿರುತ್ತದೆ ಎಂದು ಅಭಿಪ್ರಾಯವಿದೆ. ಅಭಿಷೇಕವನ್ನು ಮಣ್ಣಿನ ಮೂರ್ತಿಗೆ ಮಾಡದೆ, ಅದನ್ನು ಪ್ರತಿಬಿಂಬಿಸುವ ಕನ್ನಡಿ ಅಥವಾ ಲೋಹದ ತಟ್ಟೆಯನ್ನು ಉಪಯೋಗಿಸುತ್ತಾರೆ.

**ಪೂಜೆ:** ಪೂಜೆ ಎಂದರೆ ನಾವು ಆರಾಧಿಸುವ ದೇವರಿಗೆ ಪ್ರೇಮದಿಂದ ಮಾಡುವ ಸೇವೆ. ಯಾಂತ್ರಿಕವಾಗಿ ಮಾಡುವ ಮಂತ್ರಗಳ ಪಠನದಿಂದಾಗಲಿ, ಹೂವುಗಳ ಅರ್ಚನೆಯಿಂದಾಗಲಿ, ಧೂಪ, ದೀಪ, ಆರತಿಯಿಂದಾಗಲಿ ಪೂಜೆಯಾಗುವುದಿಲ್ಲ. ನಮಗೆ ದೇವರ ಮೇಲಿರುವ ಪ್ರೇಮ, ಶ್ರದ್ಧೆ, ಭಕ್ತಿ, ಗೌರವಗಳನ್ನು ತೋರಿಸಲು ಅನೇಕ ಪವಿತ್ರ ವಸ್ತುಗಳ ಮೂಲಕ ಪೂಜಿಸುತ್ತೇವೆ. ವಿಗ್ರಹದಲ್ಲಿರುವ ದೈವೀಶಕ್ತಿಯನ್ನು ಉದ್ದೀಪನಗೊಳಿಸಿ, ದರ್ಶನ ಪಡೆಯಲು ಹೃದಯಾಂತರಾಳದಿಂದ ಪ್ರಾರ್ಥಿಸಬೇಕು. ಪೂಜೆಯಲ್ಲಿ ಬರುವ ಪವಿತ್ರವಾದ ವೇದಮಂತ್ರಗಳಿಂದ ಎಲ್ಲರಿಗಾಗಿ ದೇವತೆಗಳ ಆಶೀರ್ವಾದವನ್ನು ಬೇಡಬೇಕು. ಇದಾದ ಮೇಲೆ ಕಲಶ ಸ್ಥಾಪನೆ. ದೇವರ ಮುಂದಿಟ್ಟಿರುವ ಕಲಶವು (ಕುಂಭ) ಪೂರ್ಣತೆಯನ್ನು ಸೂಚಿಸುತ್ತದೆ. ಇದನ್ನೇ ಪೂರ್ಣಕುಂಭ ಎನ್ನುವರು. ಪುರಾತನ ಕಾಲದಲ್ಲಿ ಈ ಕುಂಭಸ್ಥಾಪನೆಯನ್ನು ದೇವಸ್ಥಾನದಲ್ಲೇ ಮಾಡುತ್ತಿದ್ದರು. ಈಗಲೂ ಅದೇ ರೀತಿ ಕಲಶ ಸ್ಥಾಪನೆಯನ್ನು ಪೂಜೆಗೆ ಮೊದಲು ಮಾಡುವರು. ಪೂಜೆ ಮಾಡುವವರು ಅಂತರಂಗ, ಬಹಿರಂಗ ಶುದ್ಧಿಯನ್ನು ಮಾಡಿಕೊಳ್ಳಬೇಕು. ಇದರಿಂದ ಪೂಜಾಕಾರ್ಯದಲ್ಲಿ ಸಂಪೂರ್ಣ ಆಸಕ್ತಿ, ಶ್ರದ್ಧೆ ಮತ್ತು ಚೈತನ್ಯ ಉಂಟಾಗುತ್ತದೆ. ಇದರಿಂದ, ಅಂತರ್ಗತವಾಗಿರುವ ದೈವತ್ವದೊಡನೆ ಸ್ಪಂದಿಸುವ ಅನುಭವ ಪಡೆಯಬಹುದು. ಮೂರ್ತಿಪೂಜೆ ಮಾಡುವವರನ್ನು ವಿಗ್ರಹಾರಾಧಕರು ಎನ್ನುವರು. ಇದರಲ್ಲಿ ಆಳವಾದ ಅಂತರಾರ್ಥವಿದೆ. ಹಿಂದೂಗಳ ವಿಗ್ರಹಾರಾಧನೆಯಲ್ಲಿ ವಿಗ್ರಹವೇ ಭಗವತ್‌ಸ್ವರೂಪ. ಅದರಲ್ಲೇ ಸರ್ವಶಕ್ತಿ, ಸರ್ವವ್ಯಾಪಕತೆ, ಸರ್ವಜ್ಞತೆಯನ್ನು ಭಕ್ತನು ಕಾಣುತ್ತಾನೆ. ಪ್ರಾಣಪ್ರತಿಷ್ಠಾಪನೆ ಮಾಡದಿದ್ದರೂ ಅದರಲ್ಲಿ 'ಚಿತ್' ಅಂಶ ಇದ್ದೇ ಇರುತ್ತದೆ. ಇತಿ-ಮಿತಿಯಿರುವ ವಿಗ್ರಹದಲ್ಲಿ ಅನಂತತೆಯನ್ನು ಪ್ರಾಣಪ್ರತಿಷ್ಠಾಪನೆ ಮಾಡುವುದರಿಂದ ಅದು ಬರಿಯ ಮಣ್ಣಿನ ಗೊಂಬೆ ಎಂದು ಯಾರಿಗೂ ಎನಿಸುವುದಿಲ್ಲ.

ಪೂಜಾಸಮಯದಲ್ಲಿ ಹೂವನ್ನು ಗಂಧದಲ್ಲಿ ಅದ್ದಿ ದೇವತೆಗಳಿಗೆ ಅರ್ಪಣೆ ಮಾಡುತ್ತಾರೆ. ಐದು, ಹತ್ತು, ಹದಿನಾರು ವಸ್ತುಗಳಿಂದ ಪೂಜಿಸುತ್ತಾರೆ. ಇತರ ದೇವತೆಗಳು, ಲೋಕಪಾಲಕರು, ನವಗ್ರಹಗಳು, ನವಮಾತೃಕೆಯರು, ದೇವಿಯ ೬೪ ಸ್ತ್ರೀಸಹಾಯಕರು, ದೇವೀಪೀಠದ ಹನ್ನೊಂದು ಜನ ದೇವತೆಗಳನ್ನು ಕ್ರಮವಾಗಿ ಆರಾಧಿಸುತ್ತಾರೆ. ಶ್ರೀಮನ್ನಾರಾಯಣ ಮತ್ತು ಇತರ ದೇವತೆಗಳನ್ನೂ, ಅವರ ಶಕ್ತಿಗಳನ್ನೂ ಪೂಜಿಸುತ್ತಾರೆ. ದುರ್ಗಾಮಾತೆಯೇ ಮುಖ್ಯ ದೇವತೆ, ಇತರ ದೇವತೆಗಳು ದುರ್ಗಾಮಾತೆಯ ಇತರ ರೂಪಗಳು ಅಥವಾ ಜೊತೆಯ ದೇವತೆಗಳು.

**ಕುಮಾರೀಪೂಜೆ** : ಲೋಕದಲ್ಲಿರುವ ಎಲ್ಲಾ ಸ್ತ್ರೀಯರಲ್ಲೂ ದಿವ್ಯಮಾತೆಯು ವ್ಯಕ್ತವಾಗಿದ್ದಾಳೆ ಎಂದು ದೇವೀ ಮಾಹಾತ್ಮ್ಯದಲ್ಲಿ ಹೇಳಲಾಗಿದೆ. ಕುಮಾರೀ ಪೂಜೆಯನ್ನು ದೇವಿಯ ಪೂಜೆಯ ಕ್ರಮದಿಂದ, ಮಂತ್ರೋಚ್ಚಾರಣೆಯಿಂದ, ಮತ್ತು ಇತರ ವಿಧವಾದ ಪೂಜಾಕ್ರಮಗಳಿಂದ ಮಾಡುತ್ತಾರೆ. ೧-೬ ವರ್ಷದ ಕನ್ಯೆಯನ್ನು ಪೂಜಿಸಬೇಕೆಂದು ಧರ್ಮಗ್ರಂಥಗಳು ತಿಳಿಸುತ್ತವೆ. ೫ ವರ್ಷದ ಕನ್ಯೆಯನ್ನು 'ಸುಭಗಾ' ಎಂದೂ, ೭ ವರ್ಷದವಳನ್ನು 'ಮಾಲಿನೀ' ಎಂದು ಕರೆಯುತ್ತಾರೆ.



ದುರ್ಗಾಪೂಜೆಯಲ್ಲಿ ಕುಮಾರಿಪೂಜೆ

**ಸಂಧಿ ಪೂಜೆ:** ದುರ್ಗೆಯ ಕರಾಳ ರೂಪವಾದ ಚಾಮುಂಡಾ ರೂಪವನ್ನು ಅಷ್ಟಮಿ ಮತ್ತು ನವಮಿಯ ಸಂಧಿಕಾಲದಲ್ಲಿ ಪೂಜಿಸುತ್ತಾರೆ. ಬಲಿಯೂ ಸೇರಿದಂತೆ ಪೂರ್ಣ ಪೂಜೆಯನ್ನು ೪೮ ನಿಮಿಷಗಳಲ್ಲಿ ಮಾಡಬೇಕು. ಈ ಪೂಜೆ ಅತ್ಯಂತ ಪ್ರಶಸ್ತವಾದುದು. ಈ ಸಮಯದಲ್ಲಿಯೇ ದೇವಿಯು ತನ್ನ ಶೌರ್ಯದಿಂದ ಚಂಡಮುಂಡರೆಂಬ ಇಬ್ಬರು ರಾಕ್ಷಸರನ್ನು ಕೊಂದು ಹಾಕಿದಳು. ಅಂತರಂಗದ ಶತ್ರುಗಳನ್ನು ಮರ್ದನ ಮಾಡುವುದರ ಮೂಲಕ ದೇವಿಯ ಕೃಪೆಯನ್ನು ಪಡೆಯಲು ಸಾಧ್ಯವಾಗುವ ಇದು ಸಾಧಕನಿಗೆ, ಭಕ್ತನಿಗೆ ಪವಿತ್ರ ಸಮಯ. ಈ ಪೂಜೆ ದಿನದ ಯಾವ ಸಮಯದಲ್ಲಾದರೂ ಬರಬಹುದು, ಮಧ್ಯ ರಾತ್ರಿಯಲ್ಲಾದರೂ ಬರಬಹುದು. ೧೦೮ ದೀಪಗಳನ್ನು ಬೆಳಗುವ ಮೂಲಕ ನಮ್ಮಲ್ಲಿರುವ ಅಜ್ಞಾನವೆಂಬ ಕತ್ತಲೆಯನ್ನು ಹೋಗಲಾಡಿಸಿ, ಆಧ್ಯಾತ್ಮಿಕತೆಯ ಜ್ಞಾನಜ್ಯೋತಿಯನ್ನು ನೀಡೆಂದು ದುರ್ಗಾಮಾತೆಯನ್ನು ಪ್ರಾರ್ಥಿಸುವುದು ವಾಡಿಕೆ.

**ಬಲಿ:** 'ಬಲಿ' ಎಂಬುದರ ಅರ್ಥ ಅರ್ಪಣೆ. ಪೂಜೆಯ ಎಲ್ಲಾ ಕಾರ್ಯಗಳೂ ದೇವಿಗೆ ಅರ್ಪಣೆಯಾಗಿರುವಂತೆ ಬಲಿಯೂ ಅತ್ಯಗತ್ಯವಾಗಿರುವುದರಿಂದ ಅದು ವಿಶೇಷ ಅರ್ಥವನ್ನು ಒಳಗೊಂಡಿದೆ. ಪುರಾತನ ಆಚರಣೆಗಳು ಮತ್ತು ತಂತ್ರಶಾಸ್ತ್ರದ ಪ್ರಕಾರ, ಇತಿಹಾಸಗಳ ಪ್ರಕಾರ, ದೇವಿಯು ರಕ್ತಪಿಪಾಸೆಯುಳ್ಳವಳು. ಹಳೆಯ ಕ್ಷುದ್ರ ದೇವತೆಗಳನ್ನೇ ಅನಂತರ ಸಂಸ್ಕರಿಸಿ ವಿಶಾಲವಾದ ಮನೋಭಾವನೆ, ಏಕದೇವತೆಯ ಕಲ್ಪನೆಗಳು ಬಂದವು ಎಂಬುದಕ್ಕೆ ಇದು ಸಾಕ್ಷಿ. ಬಲಿಯನ್ನು ಸ್ವೀಕಾರ ಮಾಡುವವಳಾದ್ದರಿಂದ ಅವಳು ದುಷ್ಟರ ಸಂಹಾರ ಮಾಡುವವಳು ಎಂದು ಕೆಲವರು ಅಭಿಪ್ರಾಯ ಪಡುವರು. ನಿಜವಾದ 'ಬಲಿ' ಎಂದರೆ ನಮ್ಮೊಳಗಿರುವ ಅರಿಷಡ್ವರ್ಗಗಳ (ಕಾಮ, ಕ್ರೋಧ, ಲೋಭ, ಮೋಹ, ಮದ, ಮಾತ್ಸರ್ಯ) ಬಲಿಯನ್ನು ಕೊಡಬೇಕು. ದೇವಿಗೆ ಕೋಣ, ಆಡು, ಕುರಿ ಮತ್ತು ಕೋಳಿಗಳನ್ನು ಬಲಿಕೊಡುತ್ತಾರೆ. ಹಿಂಸೆಯನ್ನು ಬಯಸದವರು, ಕಬ್ಬು, ಬಾಳೆಹಣ್ಣು ಅಥವಾ ಬೂದುಕುಂಬಳ ಕಾಯಿಯನ್ನು ಅರ್ಪಿಸುತ್ತಾರೆ.

**ಹೋಮ:** ಹೋಮದ ಮೂಲಕ ಅಗ್ನಿರೂಪದಲ್ಲಿರುವ ಮಾತೆಗೆ ಪೂಜೆ, ನೈವೇದ್ಯ ಮಾಡಲಾಗುತ್ತದೆ. ಹೋಮಕುಂಡದಲ್ಲಿ ಉರಿಯುತ್ತಿರುವ ಅಗ್ನಿಯು ಎಲ್ಲಾ ಸಾಮಗ್ರಿಗಳನ್ನು ಭಕ್ಷಿಸುತ್ತದೆ. ಆದ್ದರಿಂದ ಎಲ್ಲಾ ದೇವತೆಗಳನ್ನು ಹೋಮಕುಂಡದ ಅಗ್ನಿಯಲ್ಲಿ ಆಹ್ವಾನಿಸಿ ಕಡೆಗೆ ಪೂರ್ಣಾಹುತಿಯನ್ನು ನೀಡುತ್ತಾರೆ. ದೇವಿಯು ವಿಶ್ವದ ಎಲ್ಲಾ ರೂಪಗಳಲ್ಲಿ ಇರುವುದರಿಂದ ಅಗ್ನಿಗೆ ಎಲ್ಲಾ ಪರಿಕರಗಳನ್ನು ಅರ್ಪಣೆ ಮಾಡುತ್ತಾರೆ. ಹೋಮವನ್ನು ಅಷ್ಟಮಿಯ ದಿನ ಅಥವಾ ಪೂಜೆಯ ಕೊನೆಯ ದಿನವಾದ ನವಮಿಯಂದು ಮಾಡಬೇಕು. ಶ್ರೇಷ್ಠ ವಸ್ತುಗಳನ್ನು ಅಗ್ನಿಗೆ ಹಾಕುವುದರ ಮೂಲಕ 'ಇವು ನನ್ನವಲ್ಲ' ಎಂಬ ತ್ಯಾಗ ಮನೋಭಾವ ಬೆಳೆಯುತ್ತದೆ.

**ವಿಸರ್ಜನೆ:** ಇದು ಪೂಜೆಯ ಅಂತಿಮ ಘಟ್ಟ. ಪೂಜಾದಿನಗಳಲ್ಲಿ ದೇವಿಗೆ ಸುಪ್ರಭಾತ ಹಾಡಿ, ಪ್ರಾರ್ಥಿಸಿ, ಪೂಜಿಸಿದ್ದಾಯಿತು. ಈಗ ಅವಳಿಗೆ ವಿದಾಯ ಹೇಳುವ ಸಮಯ ಬಂದಿದೆ. ಅವಳು ಮಹೇಶ್ವರನ ಅರ್ಧಾಂಗಿಯಾಗಿ ಕೈಲಾಸ ಪರ್ವತದಲ್ಲಿ ವಾಸಿಸುತ್ತಾಳಾದ್ದರಿಂದ ವಿಸರ್ಜನೆ ಮಾಡುವಾಗ ಕನ್ನಡಿಯನ್ನು ನೀರಿಗೆ ಸಮರ್ಪಿಸಿ, ದೇವರ ವಿಗ್ರಹ ಕಳಶ ಮುಂತಾದ ಪೂಜಿಸಿದ ವಸ್ತುಗಳನ್ನು ಸ್ವಲ್ಪ ಅಲುಗಾಡಿಸುವ ಮೂಲಕ ವಿಸರ್ಜನೆಯನ್ನು ಮಾಡಿ, ಮುಂದಿನ ಪೂಜೆಗೆ ಪುನಃ ಬರುವಂತೆ ಪ್ರಾರ್ಥಿಸುತ್ತಾರೆ. ವಿಸರ್ಜನೆಯೊಂದಿಗೆ ಪೂಜೆ ಮುಕ್ತಾಯಗೊಳ್ಳುತ್ತದೆ. ಅವಳು ಶಕ್ತಿ ಕುಂದದವಳು, ನಿರಂಜನಿ, ಲೋಕಮಾತೆ, ಅತೀತಳಾದವಳು. ಅತೀತವಾದುದನ್ನು ಒಂದು ಸಣ್ಣ ವಿಗ್ರಹದಲ್ಲಿ ಕಾಣಲು ನಾವು ಯತ್ನಿಸುತ್ತೇವೆ. ಅತೀತತೆಯನ್ನು ಅನುಭವಿಸಿದ ಮೇಲೆ ಅಶಾಶ್ವತವಾದ ಮಣ್ಣಿನ ವಿಗ್ರಹವನ್ನು ನೀರಿನಲ್ಲಿ ಮುಳುಗಿಸಿ ಪಂಚಭೂತಗಳಲ್ಲಿ ಲೀನ ಮಾಡುತ್ತೇವೆ. ಎಲ್ಲಾ ಪೂಜಾ ಕ್ರಿಯೆಗಳೂ ನಮ್ಮನ್ನು ಮೂರ್ತತೆಯಿಂದ ಅಮೂರ್ತತೆಯತ್ತ ಕೊಂಡೊಯ್ಯುವ ಸಾಧನಗಳಾಗಬೇಕು. ಆಗ ನಿಜವಾಗಿಯೂ ಅವು ಪೂರ್ಣವಾಗುತ್ತವೆ. ಕ್ರಿಯೆ, ಭಾವನೆಗಳು ಒಂದಾಗಿ ಭಕ್ತಿ, ಜ್ಞಾನಗಳಿಗೆ ನಾಂದಿಯಾದಾಗ ಪೂಜೆ ಸಾರ್ಥಕವಾಗುತ್ತದೆ. *